ಅಧ್ಯಕ್ಷರು.—ಆ ಹಣ ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—ಹರಿಜನರಿಗೋಸ್ಕರ ಮನೆ ಕಟ್ಟುವುದನ್ನು ಪೂರ್ಣ ಮಾಡಲು ಈಗ ಇರ ತಕ್ಕ ವೇಗದಿಂದ ನಡೆದರೆ 60 ವರ್ಷಗಳು ಬೇಕಾಗುತ್ತದೆ ಎಂದು ಸರಕಾರಕ್ಕೆ ಗೊತ್ತಾಗಿದೆ.

ಶ್ರಿಮತಿ ಸುಶೀಲಾಬಾಯಿ ಹೀರಾಚಂದ್ ಸಾ.—ಹರಿಜನರಿಗೆ ಮನೆ ಕಟ್ಟಲು ಸಾಲ ಕೊಟ್ಟಿದ್ದೀರಿ, ಆದರೆ ಸಬ್‌ಸೀಡಿ ಕೊಟ್ಟಿಲ್ಲ. ಈ ಪರಿಸ್ಥಿತಿಯಲ್ಲಿ ಸಾಲದ ಹಣ ತಿರುಗಿ ಕೊಡಲು ಹರಿಜನರಿಗೆ ಸಾಧ್ಯವಾಗುವುದಿಲ್ಲ, ಬಹಳ ಕಷ್ಟವಾಗುತ್ತದೆ. ಆದುದರಿಂದ ಈಗ ಕೊಟ್ಟಿರುವ ಸಾಲದ ಹಣವನ್ನು ಅವರಿಗೆ ಬಿಟ್ಟು ಕೊಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಸಾಲ ಕೊಟ್ಟಿದ್ದರೂ ಮನೆ ಪೂರ್ತಿಯಾಗಿಲ್ಲ ಎಂಬುದು ಸರಕಾರಕ್ಕೆ ಗೊತ್ತಿದೆ. ಈಗ ಸಾಲ ಕೊಟ್ಟಿರತಕ್ಕಂಥಾದ್ದು ಕಾನೂನುಬದ್ಧವಾಗಿ ಕಾನೂನಕ್ಕೆ ಅನುಸಾರವಾಗಿ ಕೊಡಲಾಗಿದೆ. ಅದನ್ನು ಯಾವ ರೀತಿ ವಾಪಸ್ ಕೊಡುವ ಬಗ್ಗೆ ಸೌಕರ್ಯ ಒದಗಿಸಬೇಕು ಎಂಬುದಕ್ಕೆ ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಅಪೂರ್ಣವಾದ ಮನೆಗಳು ಎಷ್ಟು ಇವೆ ? ಇವುಗಳನ್ನು ಪೂರ್ತಿ ಮಾಡಲು 15 ಲಕ್ಷ ರೂ. ಬೇಕು ಎಂದು ಅಪ್ಪಣೆ ಕೊಡಿಸಿದಿರಿ. 15 ಲಕ್ಷ ಬೇಕು ಎಂದು ಯಾವ ಆಧಾರದ ಮೇಲೆ ಅಂದಾಜು ಮಾಡಿದ್ದೀರಿ ?

ಶ್ರೀ ಕೆ. ಪ್ರಭಾಕರ್.—ಅದು ಅಪ್ರಾಕ್ಟಿಮೇಟ್ ರಫ್ ಎಸ್ಟಿಮೇಟ್ ಇದೆ. ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕೇಳಲಾಯಿತು. ಒಂದು ಮನೆ ಪೂರ್ತಿಯಾಗುವುದಕ್ಕೆ 400 ರೂ. ಬೇಕಾಗಬಹುದು ಇನ್ನೊಂದಕ್ಕೆ 25 ರೂ. ಬೇಕಾಗಬಹುದು ಆದರೆ ಇಂಥ ಎಲ್ಲ ಮನೆಗಳೂ ಅಪೂರ್ಣ ಮನೆಗಳೇ ಎಂದು ಪರಿಗಣಿಸಲಾಗಿದೆ. ಒಟ್ಟಿನಲ್ಲಿ 15-16 ಲಕ್ಷ ಬೇಕಾಗಬಹುದು ಎಂದು ಸರಕಾರಕ್ಕೆ ಗೊತ್ತಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯ. ಮನೆ ಕಟ್ಟಿಸಿಕೊಡುವುದರ ಜೊತೆಗೆ ಹರಿಜನರ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಒದಗಿಸಬೇಕೆಂದು ಸರಕಾರದ ನೀತಿ ಇದೆ ಅಲ್ಲವೇ ?

ಶ್ರೀ ಕೆ. ಪ್ರಭಾಕರ್.—ಅದಕ್ಕೆ ಉತ್ತರ ಕೊಟ್ಟಿದೆ. ವಿದ್ಯಾಭ್ಯಾಸದ ಪ್ರಗತಿ ಸಾಧನೆ ಮಾಡತಕ್ಕದ್ದು ಅದೊಂದು ಬೃಹದಾಕರ ಪ್ರಶ್ನೆಯಾಗಿದೆ. ಈಗ ಇರತಕ್ಕ ಹಾಸ್ಟೆಲ್ಲುಗಳು ಸಾಲದು. ಹರಿಜನರಿಗೆ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಸೌಲಭ್ಯ ಒದಗಿಸಬೇಕೆಂದು ಸರಕಾರ ಪ್ರಯತ್ನಿಸುತ್ತಿದೆ.

Sri C. J. MUCKANNAPPA.—I seek the protection of the Chair. He is holding the paper weight in his hand. I do not know whom he is going to hit. Please ask him to keep it on the table.

Mr. SPEAKER.—If the Hon'ble Member wants his head to be safe, let him put it below the desk.

ಶ್ರೀ ಡಿ. ಎಂ. ಸಿದ್ದಯ್ಯ.—ಹರಿಜನರ ಪ್ರಗತಿಗೋಸ್ಕರ ಯೋಜನೆಗಳು ಹಲವಾರು ಇವೆ. ಮನೆ ಕಟ್ಟಿಸಿಕೊಡತಕ್ಕಂಥಾದ್ದು ಇದೊಂದು ಆಗಿದ್ದರೂ ವಿದ್ಯಾಭ್ಯಾನ ಪ್ರಗತಿ ಮತ್ತು ಎಕನಾಮಿಕ್ ಫಾಕ್ಟರ್‌ನಲ್ಲಿ ಪ್ರಗತಿ ಸಾಧಿಸಬೇಕಾದುದು ಹೆಚ್ಚು ಅಗತ್ಯವಾಗಿರುತ್ತದಲ್ಲವೇ ?

Mr. SPEAKER.—That is remotely relevant. If the reply is to be xhaustive then there will be no time left for further supplementaries.

ಶ್ರೀ ಕೆ. ಪ್ರಭಾಕರ್.—ವಿದ್ಯಾಭ್ಯಾಸದ ಪ್ರಗತಿಗಾಗಿ ಹೆಚ್ಚಾಗಿ ಶ್ರದ್ಧೆ ವಹಿಸಬೇಕಾದುದು ಅವಶ್ಯಕ ಎಂಬುದು ಸರಕಾರಕ್ಕೆ ಗೊತ್ತಿದೆ. ಅದನ್ನು ಜಾಸ್ತಿ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡಲಾಗುತ್ತಿದೆ.

Inclusion of Banajar Community in the list of Scheduled Castes and Scheduled Tribes.

*Q.—316. **Sri M. N. KRISHNA SINGH** (Jagalur).—

Will the Government be pleased to state :—

(*a*) whether the Banajar Community (*i.e.*, Lambanis) has been included in list of Scheduled Castes or Scheduled Tribes, Girijans ;

(*b*) whether any separate survey has been made regarding the population and the customs of the people of this community ;

(*c*) if not, whether they would take suitable steps to conduct a survey in this regard ?

A.—Sri K. PRABHAKAR (Deputy Minister for Social Welfare) [on behalf of SMT. YASHODARA DASAPPA (Minister for Social Welfare)].—

(*a*) Banajar Community (*i.e.*, Lambanis) is in the list of Scheduled Castes in ex-Mysore State region and in the list of Denotified Tribes in the ex-Hyderabad and ex-Bombay regions. They are treated as other Backward Classes in other regions.

(*b*) No.

(*c*) It is a suggestion.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಲಂಬಾಣಿಯವರನ್ನು ಮೈಸೂರು ರಾಜ್ಯದ ಪ್ರದೇಶದಲ್ಲಿ ಅನುಸೂಚಿತ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಇತರ ಪ್ರದೇಶಗಳಲ್ಲಿ ಅವರನ್ನು ಹಿಂದುಳಿದವರ ಇತರ ವರ್ಗಗಳವರೆಂದು ಪರಿಗಣಿಸಲಾಗಿದೆ ಎಂದು ಉತ್ತರ ಹೇಳಿದೆ. ಹಾಗಾದರೆ ಅವರನ್ನು ಯಾವ ವರ್ಗಕ್ಕೆ ಸೇರಿಸುತ್ತೀರಿ ?

ಶ್ರೀ ಕೆ. ಪ್ರಭಾಕರ್.—ಇದು ಕೇಂದ್ರ ಸರಕಾರಕ್ಕೆ ಸೇರಿದ ವಿಚಾರ. ಮೈಸೂರು ಸರಕಾರ ಫೈನಲ್ಲಾಗಿ ಮಾಡತಕ್ಕದ್ದಲ್ಲ. ಅನೇಕ ರಾಜ್ಯಗಳಿಂದ ಈ ಪ್ರಶ್ನೆ ಬಂದಿದೆ. ಇದರ ಮೇಲೆ ವಿಪುಲವಾಗಿ ಚರ್ಚೆಯಾಗಿದೆ. ಇಂಡಿಯಾ ಸರಕಾರದವರಿಗೆ ನಾವು ಬರೆದಿದ್ದೇವೆ. ಫೈನಲ್ಲಾಗಿ ಅವರು ಏನು ಮಾಡುತ್ತಾರೆ ಎಂಬುದಕ್ಕೆ ಉತ್ತರ ನಾವು ಕೊಡುವುದಕ್ಕೆ ನಮಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಇದನ್ನು ಯುನಿಫಾರ್ಮ್ ಆಗಿ ಯಾವಾಗ ಮಾಡುತ್ತೀರಿ ?

ಶ್ರೀ ಕೆ. ಪ್ರಭಾಕರ್.—ಅದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟದ್ದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ತಾವು ಏನು ರಿಕಮೆಂಡ್ ಮಾಡಿದ್ದೀರಿ ?

Sri B. RACHAIAH.—Don't answer it.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಪಾಯಿಂಟ್ ಆಫ್ ಆರ್ಡರ್, ಸರ್. ಉತ್ತರ ಹೇಳಬೇಡಿ ಎಂದು ಒಬ್ಬರು ಇನ್ನೊಬ್ಬ ಸದಸ್ಯರಿಗೆ ಹೇಳುವುದು ಅಧ್ಯಕ್ಷರ ಸ್ಥಾನಮಾನಕ್ಕೆ ಗೌರವಕ್ಕೆ ಕುಂದಕ ಬರುವುದಿಲ್ಲವೇ ?

Sri C. J. MUCKANNAPPA.—When he put the question the Deputy Minister was about to answer, but my friend, the Forest Minister asked him not to reply.

Mr. SPEAKER.—I will deal with it.

Sri G. V. GOWDA.—Have the Government taken any steps to secure uniformity in this matter to bring this particular community under one classification ? If so, what is the proposal ?

ಶ್ರೀ ಕೆ. ಪ್ರಭಾಕರ.—ಅದಕ್ಕೆ ಉತ್ತರ ಹೇಳಿದೆ. ಯುನಿಫಾರ್ಮಿಟಿ ಬಗ್ಗೆ ಇಂಡಿಯಾ ಸರಕಾರಕ್ಕೆ ಬರೆದಿದ್ದೇವೆ.

Sri G. V. GOWDA.—To which classification have the Government of Mysore recommended them ?

ಶ್ರೀ ಕೆ. ಪ್ರಭಾಕರ್.—ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸಬೇಕೆಂದು ಇಂಡಿಯಾ ಸರಕಾರಕ್ಕೆ ಬರೆದಿದ್ದೇವೆ.

ಶ್ರೀ ಅಂಗಡಿ ಚನ್ನಬಸಪ್ಪ.—ವರ್ಣಾಶ್ರಮ ಧರ್ಮಕ್ಕೆ ಅನುಸಾರವಾಗಿ ಲಂಬಾಣಿಗಳು ಕ್ಷತ್ರಿಯವರು ಆಗುತ್ತಾರೆ ಅಲ್ಲವೇ ?

ಶ್ರೀ ಕೆ. ಪ್ರಭಾಕರ್.—ಅದು ಈ ಪ್ರಶ್ನೆಯ ಸ್ಕೋಪ್‌ಗೆ ಮೀರಿದ್ದು.

(Question No. 208 was called out and put by the Member and answered by the Revenue Minister).

(Sri M. N. Krishna Singh rose to put a supplementary to the previous question).

Mr. SPEAKER.—The next question has already been put and answered.

ಶ್ರೀ ಕೆ. ಲಕ್ಕಪ್ಪ.—ಅವರಿಗೆ ಒಂದು ಚಾನ್ಸ್ ಕೊಡಿ, ಸ್ಪೀಕರ್.

Mr. SPEAKER.—I do not want any recommendation from any member. Since the next question has already been put and answered, it is not fair on the part of Sri Lakkappa to request the Chair to give a chance to Sri Krishna Singh to put a supplementary to the previous question.

Amount sanctioned for sinking new Irrigation Wells in Chitradurga District during 1963-64.

*Q. —208. Sri V. MASIYAPPA (Hiriyur).—

Will the Government be pleased to state :—

(*a*) the amount sanctioned and given to Chitradurga District for sinking new irrigation wells in the District during the year 1963-64 ;

(*b*) whether any representations were made for more funds on this account ;

(*c*) if so, action taken thereon ?

A.—Sri M. V. KRISHNAPPA (Minister for Revenue).—

(*a*) Rs. 2,50,000.

(*b*) Yes.

(*c*) After taking into account, the heavy demand for loans for construction of fresh irrigation wells in several districts, the Government of India were moved to allot additional funds for this Scheme. Out of the additional allotment given by them for 'Minor Irrigation Schemes' a sum of Rs. 40 lakhs was allotted for the Scheme of Construction of Irrigation Wells. Out of this additional allotment of Rs. 40 lakhs' a sum of Rs. 2,50,000 has been allotted to Chitradurga District for sanctioning the construction of new wells during the current year.

ಶ್ರೀ ವಿ. ಮಸಿಯಪ್ಪ.—(ಎ) ನಲ್ಲಿ ಎರಡುವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದೆ ಎಂದು ಹೇಳಿದಿ ರಿ. (ಸಿ) ನಲ್ಲಿ ಎರಡುವರೆ ಲಕ್ಷ ಅಡಿಶನಲ್ಲಾಗಿ ಕೊಟ್ಟಿದೆಯೆಂದು ಹೇಳಿದ್ದೀರಿ. ತಾಲ್ಲೂಕು ಬೋರ್ಡು, ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಸರಕಾರಕ್ಕೆ ಇನ್ನೂ ಹೆಚ್ಚಿನ ಹಣ ಕೊಡಬೇಕು ಎಂದು ಶಿಫಾರಸುಗಳೂ, ಹೇಳಿಕೆಗಳೂ ಬಂದಮೇಲೆ ಪುನಃ ಹೆಚ್ಚಿಗೆ ಹಣಕೊಡಲಾಗಿದೆಯೋ ಅಥವ ಮೊದಲೇ ಕೊಟ್ಟಿತೊ?

ಶ್ರೀ ಎಂ. ವಿ. ಕೃಷ್ಣಪ್ಪ.—ಎರಡುವರೆ ಲಕ್ಷ ಕೊಟ್ಟಿದ್ದು 2 ತಿಂಗಳ ಹಿಂದೆ. ಬಾವಿಗಳು ಹೆಚ್ಚಿಗೆ ಬರಬೇಕೆಂದು ಸದಾ ಕೇಳಿಕೆಗಳು ಬರುತ್ತಿರುತ್ತವೆ. ತಾವು ಮೆಂಬರುಗಳು ಕೂಡ ಹೇಳುತ್ತೀರ. ಅನೇಕರು ನಾವು ಹೋದಾಗ ರೆಪ್ರೆಸೆಂಟೂ ಮಾಡುತಾರೆ. ಇದು ಉಪಯುಕ್ತವಾದ ಯೋಜನೆ. ಆದ್ದರಿಂದ ಸಾಧ್ಯವಾದಷ್ಟು ಕೊಡುತ್ತೇವೆ. ಬರಗಾಲಕ್ಕೆ ತುತ್ತಾಗಿರುವ ಜಿಲ್ಲೆ ಎಂದು ಭಾವಿಸಿ ಪ್ರಪೊಸೆಟ್ಸುಗಳನ್ನು ಕೊಡಿ ಎಂದು ಯಾವಾಗಲೂ ಕೇಳುತಾ ಇದ್ದಾರೆ. ಎರಡುವರೆ ಲಕ್ಷ ಅಡಿಶನಲ್ ಅಲಾಟ್‌ಮೆಂಟು ಹೋದ ಡಿಸೆಂಬರಿನಲ್ಲಿ ಕೊಟ್ಟಿದ್ದೇವೆ.

ಶ್ರೀ ವಿ. ಮಸಿಯೆಪ್ಪ.—ಎರಡುವರೆ ಲಕ್ಷ ರೂಪಾಯಿ ಕೊಟ್ಟಿರುವುದರಿಂದ ಒಂದೊಂದು ತಾಲ್ಲೂಕಿಗೆ 10-20 ಬಾವಿಗಳನ್ನೂ ಕೊಡುವುದಕ್ಕಾಗುವುದಿಲ್ಲ. ಈ ವರ್ಷ ಸರಕಾರದವರು ಬಾವಿಗಳಿಗೆ ಹಣ ಕೊಟ್ಟಿದ್ದಾರೆನ್ನುವುದು ಜನರ ಗಮನಕ್ಕೆ ಬರದೆ ಇರುವುದರಿಂದ, ಇನ್ನೂ ಜಾಸ್ತಿ ಹಣ ಕೊಡುತ್ತೀರ ?